**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕಾರಿಪುರ.**

**ಸಿಸಿ ನಂ.** 334/2023

| | | |
|---|---|---|
| ಸಾಕ್ಷಿದಾರರ ಹೆಸರು | ಮನೋಜ್ ನಾಯ್ಕ್ | ಪಿಡಬ್ಲ್ಯು- 4 |
| ತಂದೆ ಹೆಸರು | ಜಿಯಾನಾಯ್ಕ | ಸಿಡಬ್ಲ್ಯು- 8 |
| ವಯಸ್ಸು | 27 | |
| ಉದ್ಯೋಗ | ಚಾಲಕ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಶಿಕಾರಿಪುರ | **23.02.2026** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದಃ-**

1. ಸಾಕ್ಷಿಗೆ ದಿಃ 10.03.2022 ರ ಸ್ಥಳ ಪಂಚನಾಮೆ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 4 ವರ್ಷಗಳ ಹಿಂದೆ ನಮ್ಮ ಅಣ್ಣನ ಬೈಕ್ ಕಳೆದು ಹೋಗಿದ್ದು, ಆ ವಿಚಾರದಲ್ಲಿ ಠಾಣೆಗೆ ಹೋಗಿದ್ದು, ಆ ಸಮಯದಲ್ಲಿ ಪೋಲೀಸರು ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ನನ್ನ ಸಹಿ ಪಡೆದು ಪೋಟೋ ತೆಗೆದುಕೊಂಡು ಹೋಗಿರುತ್ತಾರೆ. ನನಗೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆ ದಿನ ನನ್ನ ಸಮಕ್ಷಮ ಬೈಕ್ ಕಳೆದು ಹೋದ ಬಗ್ಗೆ ಮಹಜರ್ ಮಾಡಿರುತ್ತಾರೆ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು ಸಸಅ ರವರಿಂದಃ–</u>**

2. ದಿಃ 10.03.2022 ರಂದು ಶಿಕಾರಿಪುರ ಟೌನ್ ತಾಲ್ಲೂಕು ಕಚೇರಿ ರಸ್ತೆಯಲ್ಲಿ ನನ್ನ ಹಾಗೂ ಚಾಸಾ – 9 ರವರ ಸಮಕ್ಷಮ ಚಾಸಾ – 1 ರವರು ಸ್ಥಳ ತೋರಿಸಿ ಕೊಟ್ಟ ಮೇರೆಗೆ ಪೋಲೀಸರು ಮಧ್ಯಾಹ್ನ 12.30 ರಿಂದ 1.30 ರವರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿ ಓದಿ ತಿಳಿಸಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಆ ದಿನ ನಾನು ಮಹಜರ್ ನ ಎಲ್ಲಾ ವಿಚಾರ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿಪಿ – 1 ರಲ್ಲಿರುವ ಎಲ್ಲಾ ವಿಚಾರಗಳು ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ</u>**

**ಮರು ವಿಚಾರಣೆ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**